ಸ್ವತಂತ್ರವಾಗಿ ಕಂಡು ಹಿಡಿಯಲು ಕಲಿಸಿಕೊಟ್ಟಳು. ಬೇಸಗೆಯಲ್ಲಿ ಮಾತ್ರ ಸಿಗುವ ಮುಳ್ಳು ಹಣ್ಣು, ಗೇರು ಹಣ್ಣು ಮುಂತಾದ ಹಣ್ಣುಗಳ ಅಕ್ಷಯಪಾತ್ರೆಯೇ ತನ್ನ ಸುತ್ತಲೂ ಇದೆ ಎಂಬುದನ್ನು ಕಂಡು ಕವಿ ರೋಮಾಂಚಗೊಂಡರು. ಅವರ ಬದುಕಿನ ಹೊಸ ಅಧ್ಯಾಯ ಈಗ ತೆರೆದುಕೊಳ್ಳುತ್ತಿತ್ತು.

ಏಳನೇ ವಯಸ್ಸಿಗೆ ಊರು ಬಿಟ್ಟು ಮಿರ್ಜಾನಿನ ಸಂಬಂಧಿಗಳ ಮನೆಗೆ ಶಾಲಾ ಶಿಕ್ಷಣಕ್ಕೆ ಹೋದವರು ಅವರು. ವಿಶ್ವನಾಥ ಮಾವ ಸರಕಾರಿ ಶಾಲೆಯ ಶಿಕ್ಷಕರಾಗಿದ್ದರು. ಅವರು ವರ್ಗಾವಣೆ ಆದಲ್ಲೆಲ್ಲಾ ಇವರೂ ಜೊತೆಗೆ ಹೋದರು, ಕಲಿತರು. ಮುಂದೆ ಕುಮಟೆಯಲ್ಲೇ ಕಾಲೇಜು ಓದಿದರು. ಆಗೆಲ್ಲ ರಜೆಯಲ್ಲಾದರೂ ಊರಿಗೆ ಬರುವ ಅವಕಾಶ ಇತ್ತು. ಮುಂದೆ ನೌಕರಿ ಸೇರಿದ ಮೇಲೆ ಅಂಥ ಅವಕಾಶಗಳು ಕಡಿಮೆಯಾದವು. ತಂದೆಗೆ ಕೊಟ್ಟ ಮಾತಿನಂತೆ ಅರವತ್ತರ ಬಳಿಕ ಅವರೀಗ ತಮ್ಮೂರಿನಲ್ಲಿ ಶಾಶ್ವತವಾಗಿ ನೆಲೆಸಬೇಕೆಂದು ಬಂದು ಮುಟ್ಟಿದ್ದರು. ವಾಸ್ತವಿಕವಾಗಿ ಎಂದೂ ಹುಟ್ಟೂರಿನಲ್ಲಿ ದೀರ್ಘ ಕಾಲ ಉಳಿದಿಲ್ಲವಾದರೂ ಇದೆಲ್ಲ ತನಗೆ ಸಾಕಷ್ಟು ಪರಿಚಿತ ಪರಿಸರವೇ ಎಂಬ ಧೈರ್ಯ ಅವರಿಗಿತ್ತು. ನಗರವಾಸಿಗಳಾದವರು ಹುಟ್ಟಿದ ಹಳ್ಳಿಗೆ ಮರಳುವುದು ಇತ್ತೀಚಿನ ದಿನಗಳಲ್ಲಿ ಅಪರೂಪದ ಘಟನೆಯೇ ಸರಿ. ಹಾಗಿದ್ದರೂ ತಾನೊಂದು ಕ್ರಾಂತಿಕಾರಕ ಹೆಜ್ಜೆ ಇಡುತ್ತಿದ್ದೇನೆಂಬ ಭ್ರಮೆಯೇನೂ ಅವರಿಗಿರಲಿಲ್ಲ.

ಅಬ್ಬೆ ಕಾಲವನ್ನು ಮೆಟ್ಟಿ ನಿಂತ ಧೀರೆ. ಈ ಕಾಡಿನಲ್ಲಿ ತನ್ನ ಜೊತೆ ಸುದೀರ್ಘ ಕಾಲ ಬದುಕಿ ಹದಿನೈದು ವರ್ಷಗಳ ಹಿಂದೆ ಪತಿ ನರಸಿಂಹ ಭಟ್ಟರು ಅಗಲಿದಾಗಲೂ ಅವಳು ಅಳುಕಲಿಲ್ಲ. ಮಗನ ಜೊತೆ ನಗರಕ್ಕೆ ಹೋಗಿ ವಾಸಿಸಬಹುದು ಎಂಬ ಯೋಚನೆಯನ್ನೂ ಮಾಡಲಿಲ್ಲ. ತಾನಿರುವಷ್ಟು ಕಾಲ ಇಲ್ಲಿಯೇ ಇರುವೆನೆಂದು ಅನುಮಾನಕ್ಕೆ ಆಸ್ಪದವಿಲ್ಲದಂತೆ ಹೇಳಿದಳು. ಆಳುಮಕ್ಕಳನ್ನು ಮನೆಯವರೆಂಬಷ್ಟು ಪ್ರೀತಿಯಿಂದ ಕಾಣುವ ಇವಳು ಆ ದುಡಿಮೆಯವರಿಗೂ 'ಅಬ್ಬೇರು'. ಕಾಡಮೂಲೆಯ ಮರಗಳ ನಡುವೆ, ಬೆಳಗ್ಗೆ ಹಾಡುವ ಹಕ್ಕಿಯಿಂದ ಸಂಜೆ ಗುಕ್ ಗುಕ್ ಎಂದು ಮರದ ಪೊಟರೆಯಿಂದ ದನಿ ಎಬ್ಬಿಸಿ ದಟ್ಟ ಕತ್ತಲರಾತ್ರಿಯನ್ನು ಇನ್ನಷ್ಟು ರಹಸ್ಯಮಯಗೊಳಿಸುವ ಹಕ್ಕಿಯವರೆಗೆ, ಹರಿವ, ಹರಿದಾಡುವ ಜೀವಜಾಲವೆಲ್ಲ ಅವಳಿಗೆ ತಿಳಿದಿದೆ. ಆ ಪ್ರಾಣಿ, ಪಕ್ಷಿಗಳೊಡನೆ ಅವಳಿಗೆ ಬೆಳಗಾಗುತ್ತದೆ. ದೂರದ ಗಂಗಾವಳಿ ನದಿಯ ದಿಕ್ಕಲ್ಲಿ ಸಂಜೆ ಸೂರ್ಯಾಸ್ತದ ಚಿತ್ರಗಳು ಬಾನಲ್ಲಿ ಮೂಡತೊಡಗುತ್ತವೆ. ಅಲ್ಲಿಗೆ ಆ ದಿನ ಮುಗಿಯಿತು. ಗಡಿಯಾರ ತೋರುವ ಸಮಯದ ಚಿಂತೆಯಿಲ್ಲ. ಕೊಟ್ಟಿಗೆಯಲ್ಲಿ ಹಸುಗಳಿವೆ. ಅವುಗಳ ಕೊರಳ ಗಂಟೆಯ ನಾದದ ಇಂಪಿಗೆ ರಾನಭ ಮನಸೋತು ಎಷ್ಟೋ ಹೊತ್ತು ಕೂರುತ್ತಾರೆ. ಕೊಟ್ಟಿಗೆಯನ್ನು ಹಸುಗಳ ಗುಡಿ ಎಂದು ಕವಿ ಒಂದು ಪದ್ಯದಲ್ಲಿ ಕರೆದಿದ್ದಾರೆ, ಈ ಮಂಜುಳ ಕಿರುಗಂಟೆಯ ನಿನಾದದಿಂದ ಹುಟ್ಟಿದ ಮಾತದು.

ಈ ಕಾಡಿನ ಗಾಢ ಮೌನವನ್ನು ಬಿಟ್ಟು ತಾನು ಹುಡುಕಿಕೊಂಡು ಹೋದದ್ದು ಏನನ್ನು? ಅದು ತನ್ನ ಕೈಯಲ್ಲಿದ್ದ ನಿರ್ಧಾರವೇನಾಗಿರಲಿಲ್ಲ. ಇನ್ನೂ ಎಳೆಯ ಹುಡುಗ. ಶಾಲೆಗೆ ಸೇರಿಸಿದರು. ಹೋದೆ. ಬುದ್ಧಿವಂತ ಎಂದರು. ಸಂತೋಷವಾಯಿತು. ಇನ್ನೂ ಓದು ಎಂದರು. ಒಪ್ಪಿದೆ, ಓದುತ್ತ ಹೋದೆ. ಹೀಗೆ ತಾನೆ ಆಗಿದ್ದು! ನನ್ನಂತೆ ಓದಲು ತೊಡಗಿದ್ದ ಕೆಲವರು ನಾಕೈದನೇ ತರಗತಿಯ ನಂತರ ಓದು ಮುಂದುವರಿಸಲಿಲ್ಲ. ತನ್ನ ಕಥೆ ಹೀಗಾಯಿತು. ಖರೆ ಹೇಳಬೇಕೆಂದರೆ ಅದಕ್ಕೆ ಅವರಿಗೆ ಪಶ್ಚಾತ್ತಾಪ ಏನಿಲ್ಲ. ರಾನಭ ಅವರದು ಒಂದು ಚೂರು ವಿಶೇಷ ಅನಿಸುವ ಸ್ವಭಾವ. ಅವರು ಯಾವೆಲ್ಲ ಊರುಗಳಲ್ಲಿ ವಾಸಿಸಿದ್ದರೋ ಅಲ್ಲೆಲ್ಲ ಅವರು ಅದೇ ತಮ್ಮ ಊರು ಎಂಬಂತೆ ವಾಸಿಸಿದ್ದಾರೆ. ಆ ಊರಿನ ಜನಜೀವನದೊಡನೆ ಸರಾಗವಾಗಿ ಬೆರೆತು ಹೋಗುತ್ತಾರೆ. ಅದು ವಿಚಿತ್ರ ಅಥವಾ ವಿಶೇಷ ಯಾಕೆಂದರೆ, ಈ ಹೊಂದಾಣಿಕೆ ಹೇಳಿದಷ್ಟು ಸುಲಭವಲ್ಲ ಹಾಗೂ ಈ ರೀತಿ ಬಾಳಿದರಾದರೂ ಚಿಕ್ಕಂದಿನಲ್ಲಿ ತಾವು ಕೇಳಿದ ಹಕ್ಕಿಗಳ ಧ್ವನಿ ಮತ್ತು ಕಾಡಿನ ನಿಬಿಡ ನಿರಾಕಾರ ನಿಗೂಢ ಮೌನವನ್ನು ತಮ್ಮ ಹೃದಯದೊಳಗೆ ಕಾಪಿಟ್ಟುಕೊಂಡೇ ಅವರು ಸಂಚರಿಸಿದರು. ತಾವು ವಹಿಸಿದ ಬಹು ದೀರ್ಘ ಕಾಲದ ಅಭಿನಯ ಮುಗಿಯಿತೆಂಬಂತೆ ಮತ್ತೆ ಈಗ ಹಕ್ಕಿಗಳ ಹಾಡು ಕೇಳಲು ಊರಿಗೆ ಹಿಂತಿರುಗಿದ್ದರು. ಹೌದು, ಹಾಗೆನ್ನಬಹುದೆಂದು ತೋರುತ್ತದೆ.

ರಾನಭ ನನಗೆ ಪರಿಚಿತರು. ನಾನೂ